# ಆಚಾರವಿಲ್ಲದ ನಾಲಿಗೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru, page No. 47.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 236.
3. **Note:** The lyrics given in the book mentioned in Ref. 2 above are almost similar to that of the singer. But the lyrics are different in the book mentioned in Ref. 1 above. Ankita is also different. They are given separately in green highlights.

ರಾಗ: ಮೋಹನ ತಾಳ: ಅಟ್ಟ

ಆಚಾರವಿಲ್ಲದ ನಾಲಿಗೆ ನಿನ್ನ
ನೀಚ ಬುದ್ಧಿಯ ಬಿಡು ನಾಲಿಗೆ ॥ ಪ ॥

ವಿಚಾರವಿಲ್ಲದೆ ಪರರ ದೂಷಿಪುದಕ್ಕೆ
ಚಾಚಿಕೊಂಡಿರುವಂಥ ನಾಲಿಗೆ ॥ ಅಪ ॥

ಪ್ರಾತಃಕಾಲದೊಳೆದ್ದು ನಾಲಿಗೆ
ಸಿರಿ ಪತಿಯೆನ್ನ ಬಾರದೆ ನಾಲಿಗೆ
ಪತಿತ ಪಾವನ ನಮ್ಮ ರಜಪತಿ ಜನಕನ
ಸತತವು ನುಡಿ ಕಂಡ್ಯ ನಾಲಿಗೆ ॥ 1 ॥

ಚಾಡಿ ಹೇಳಲಿ ಬೇಡ ನಾಲಿಗೆ
ನಿನ್ನ ಬೇಡಿಕೊಂಬುವೆನು ನಾಲಿಗೆ
ರೂಢಿಗೊಡೆಯ ಶ್ರೀ ರಾಮನ ನಾಮವ
ಪಾಡುತಲಿರು ಕಂಡ್ಯ ನಾಲಿಗೆ ॥ 2 ॥

ಹರಿಯ ಸ್ಮರಣೆ ಮಾಡು ನಾಲಿಗೆ
ನರಹರಿಯ ಭಜಿಸು ಕಂಡ್ಯ ನಾಲಿಗೆ
ವರದ ಪುರಂದರ ವಿಠ್ಠಲ ರಾಯನ

ಚರಣ ಕಮಲ ನೆನೆ ನಾಲಿಗೆ     || 3 ||

**Note:** The lyrics given below are as the book in Ref. 1.  They are highlighted in green colour.

ರಾಗ:  ಆಹೇರಿ                    ತಾಳ:    ಅಟ್ಟ

ಆಚಾರವಿಲ್ಲದ ನಾಲಗೆ ನಿನ್ನ
ನೀಚ ಗುಣವ ಬಿಡು ನಾಲಗೆ     || ಪ ||

ನಾಚಿಕೆ-ಲಜ್ಜೆಯ ನೀ ಮುನ್ನ ಅರಿಯದೆ
ಚಾಚಿ ಕೊಂಡಿರುವಂಥ ನಾಲಗೆ     || ಅಪ ||

ಇದ್ದ ಮಾತನಾಡು ನಾಲಗೆ ಹಿಡಿ-
ದೊದ್ದರು ಹುಸಿಬೇಡ ನಾಲಗೆ
ಇದ್ದುಕೊಂಡು ಉಣ್ಣು ಅಮೃತಾನ್ನಗಳನು
ಬುದ್ದಿಯಲಿರು ಕಂಡೆಯ ನಾಲಗೆ     || ೧ ||

ಬಡವರ ಮಾತಿಗೆ ನಾಲಗೆ ನೀ
ಕಡು ಚತುರ ನುಡಿಯದಿರು ನಾಲಗೆ
ಹಿಡಿದು ಕೊಂಡೊಯ್ವರು ಯಮನ ಭಟರು ನಿನ್ನ
ನುಡಿ ಕಂಡೆಯ ಹರಿಯೆಂದು ನಾಲಗೆ     || ೨ ||

ಹರಿ ಪಾದವೆ ಗತಿಯೆಂದು ನಾಲಗೆ ನಿನಗೆ
ಪರರ ಚಿಂತೆ ಏಕೆ ನಾಲಗೆ
ಸಿರಿವರ ಪುರಂದರ ವಿಠ್ಠಲ ರಾಯನನು
ಮರೆಯದೆ ನೆನೆ ಕಂಡೆಯ ನಾಲಗೆ     || ೩ ||

**Classification:** Keerthane
**Ankita:** purandara vittala
**Location:** NA
**Category:** Jeeva Sambodhane, Jeevanoddhara

**Group Words:** Achara, nalige, pati, Krishna, rama, smarane, padma,

**Pravachana:** NA

**Explanation:** NA